1991-92ರ ಅಯವ್ಯಯದಲ್ಲಿ ಈ ಕಾಲೇಜಿನ ಕಟ್ಟಡಗಳ ನಿರ್ಮಾಣಕ್ಕೆಂದು ರೂ. 5.28 ಲಕ್ಷ ಗಳನ್ನು ಒದಗಿಸುವ ಉದ್ದೇಶಿಸಿದೆ.

ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳು

(504) - ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರವು ಕ್ಯಾಪಿಟೇಶನ್ ಆಧಾರಿತ ಕಾಲೇಜುಗಳನ್ನು ಹಂತಹಂತವಾಗಿ ಕಡಿಮೆಗೊಳಿಸುವುದಾಗಿ ಹೇಳಿರಲಿಲ್ಲವೆ?

ಆ) ಹಾಗಾದರೆ ಆ ರೀತಿ ಕಡಿಮೆಗೊಳಿಸಲಾಗಿದೆಯೇ

ಇ) ಈಗ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆ (ಅಫೀಲಿಯೇಶನ್)ಹೊಂದಲು ಎಷ್ಟು ಖಾಸಗಿ ಕಾಲೇಜುಗಳು ಅರ್ಜಿಗಳನ್ನು ಸಲ್ಲಿಸಿದೆ?

ಈ) ಈ ಅರ್ಜಿಗಳಿಗೆ ಸಂಯೋಜನಾ ಸಮಿತಿ ಶಿಫಾರಸ್ಸು ನೀಡಿದೆಯೇ?

ಉ) ಹಾಗಿದ್ದಲ್ಲಿ ಎಷ್ಟು ಕಾಲೇಜುಗಳಿಗೆ ಶಿಫಾರಸ್ಸು ಮಾಡಲಾಗಿದೆ ಮತ್ತು ಎಲ್ಲೆಲ್ಲಿ ಶಿಫಾರಸ್ಸು ಮಾಡಲಾಗಿರುವುದು?

ಊ) ಕ್ಯಾಪಿಟೇಶನ್ ಆಧಾರಿತ ಹೊಸ ಕಾಲೇಜುಗಳನ್ನು ಸರಕಾರ ಮಾನ್ಯ ಮಾಡುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಎಂಟು.

ಈ) ತನಿಖೆ ನಡೆಯುತ್ತ ಇದೆ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

ಪಬ್ಲಿಕ್ ಹೆಲ್ತ್ ಸೆಂಟರ್‌ಗಳಿಗೆ ದೊರಕಬೇಕಾದ ಸೌಲಭ್ಯಗಳ ಬಗ್ಗೆ

(320) - ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಕಾರದ ನಿಬಂಧನೆಯ ಪ್ರಕಾರ ಒದಗಿಸಬೇಕಾಗಿರುವ ಸೌಲಭ್ಯಗಳೇನು? (ಕಟ್ಟಡಗಳನ್ನು ಸೇರಿಸಿ)

ಆ) ಈ ಸೌಲಭ್ಯಗಳನ್ನು ಹಾಸನ ತಾಲ್ಲೂಕು ದುದ್ದ ಆಸ್ಪತ್ರೆಗೆ ಮತ್ತು ಅರಸೀಕೆರೆ ತಾಲ್ಲೂಕಿನ ಜಾವಗಲ್ ಮತ್ತು ಗಂಡಸಿ ಆಸ್ಪತ್ರೆಗಳಿಗೆ ಒದಗಿಸಲಾಗಿರುವುದೇ?

ಇ) ಹಾಗಿಲ್ಲದಿದ್ದಲ್ಲಿ ಕಟ್ಟಡ ಮತ್ತು ಸಿಬ್ಬಂದಿಗಳನ್ನು ಹಾಗೂ ಇತರೆ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 6 ಹಾಸಿಗೆಗಳು, ಪ್ರಯೋಗಶಾಲೆ 30,000 ರೂ. ಮೊತ್ತದ ಔಷಧ, ವಾಹನ, ಕಟ್ಟಡ, ಇವುಗಳನ್ನು ಒದಗಿಸಲಾಗುವುದು, ಅಗತ್ಯ ಸಿಬ್ಬಂದಿಗಳನ್ನು ಸಹ ಒದಗಿಸಲಾಗುವುದು.

ಆ) ಬಹುಪಾಲು ಒದಗಿಸಲಾಗಿದೆ.

ಇ) ಪೂರ್ಣ ಸೌಲಭ್ಯವನ್ನೋ ಹಣದ ಲಭ್ಯತೆಯನ್ನನುಸರಿಸಿ ಮುಂಬರುವ ವರ್ಷಗಳಲ್ಲಿ ಒದಗಿಸಲು ಪ್ರಯತ್ನಿಸಲಾಗುವುದು.

ಮೋಟರ್ ವೆಹಿಕಲ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಮತ್ತು ತರಬೇತಿ ಬಗ್ಗೆ

(17)- ಶ್ರೀ ಕೆ. ಲಕ್ಷ್ಮಣ್ಣ, (ರಾಜಾಜಿನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಎಷ್ಟು ಜನ ಮೋಟಾರ್ ವೆಹಿಕಲ್ ಇನ್‌ಸ್ಪೆಕ್ಟರ್‌ಗಳನ್ನು ನೇಮಿಸಿ ಕೊಳ್ಳಲಾಗಿದೆ ಹಾಗೂ ಅವರ ತರಬೇತಿ ಅವಧಿ ಎಷ್ಟು?

ಆ) ಅವರನ್ನು ಯಾವ ಯಾವ ಭಾಗಗಳಲ್ಲಿ ಸೇವೆ ಸಲ್ಲಿಸಲು ನಿಯೋಜಿಸಲಾಗಿದೆ?

ಇ) ನಿಯೋಜಿಸಿಲ್ಲದಿದ್ದರೆ, ಅವರು ಇನ್ನೂ ತರಬೇತಿಯಲ್ಲಿಯೇ ಮುಂದುರರಿಯುತ್ತಿದ್ದಾರೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ತರಬೇತಿ ಅವಧಿ ಒಂದು ವರ್ಷ ಮಾತ್ರ.

ಆ) ಮೈಸೂರಿನಲ್ಲಿರುವ ಆಡಳಿತ ತರಬೇತಿ ಸಂಸ್ಥೆ, ಕ.ರಾ.ರ.ಸಾ. ಸಂಸ್ಥೆ. ಪೋಲೀಸ್ ತರಬೇತಿ ಸಂಸ್ಥೆ, ಸಾರಿಗೆ ಆಯುಕ್ತರ ಕಛೇರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಲ್ಲಿ.

ಇ) ಹೌದು.

ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳ ಅನುಮತಿಗಾಗಿ ಬಂದಿರುವ ಅರ್ಜಿಗಳ ಬಗ್ಗೆ.

(45) - ಶ್ರೀ ಎಂ.ವಿ. ವೆಂಕಟ್ಟಪ್ಪ (ಮುಳಬಾಗಿಲು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡುವ ಬಗ್ಗೆ ಅನುಮತಿ ಕೋರಿ ಖಾಸಗಿಯವರಿಂದ ಸರ್ಕಾರದವರಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಹಾಗೂ ಅವರ ಹೆಸರುಗಳೇನು?

ಆ) ಆ ಅರ್ಜಿಗಳ ಪೈಕಿ ಭಾರತ ವೈದ್ಯಕೀಯ ಪರಿಷತ್ತಿನ ನಿಯಮಗಳ ಪ್ರಕಾರ ಅನುಮತಿ ಕೊಡಬಹುದಾದ ಅರ್ಜಿದಾರರ, ಹೆಸರುಗಳೇನು?

ಇ) ಮೆಡಿಕಲ್ ಕಾಲೇಜುಗಳನ್ನು ಖಾಸಗಿಯವರು ಪ್ರಾರಂಭ ಮಾಡುವ ಬಗ್ಗೆ ಸರ್ಕಾರದವರ ಧೋರಣೆಯೇನು?

ಶ್ರೀಮತಿ. ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):

ಅ) ಏಳು ವಿಶ್ವವಿದ್ಯಾನಿಲಯದ ಮುಖಾಂತರ ಬಂದ ಅರ್ಜಿಗಳು:

1) ಸಹ್ಯಾದ್ರಿ ವಿದ್ಯಾಸಂಸ್ಥೆ, ಶಿವಮೊಗ್ಗ.

2) ನ್ಯಾಷನಲ್ ಎಜುಕೇಷನ್ ಸೊಸೈಟಿ, ಶಿವಮೊಗ್ಗ.

3) ಪಾದರ್‌ಮುಲ್ಲರ್ ಇನ್ಸ್‌ಟಿಟ್ಯೂಟ್, ಕಂಕನಾಡಿ, ಮಂಗಳೂರು.

4) ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ ಕೆ.ವಿ.ಜಿ. ಮೆಮ್ಮೋರಿಯಲ್ ಕಾಲೇಜು, ಸುಳ್ಯ, ಮಂಗಳೂರು.

5) ನಿಟ್ಟೆ ವಿದ್ಯಾಸಂಸ್ಥೆ, ಮಂಗಳೂರು.

6) ಅಂಬೇಡ್ಕರ್ ಮಿಷನ್, ಶಿವಮೊಗ್ಗ.

7) ಅಲ್ ಮಹಮದ್ ವಿದ್ಯಾಸಂಸ್ಥೆ, ಭಾದ್ರಾವತಿ.